ವಿದ್ಯುತ್ತಿನ ಪ್ರಮಾಣ ಸುಮಾರು 33,242 ದಶಲಕ್ಷ ಯೂನಿಟ್ಟುಗಳು. ಹೀಗಾಗಿ ಸುಮಾರು 5707 ದಶಲಕ್ಷ ಯೂನಿಟ್ಟುಗಳ ಕೊರತೆ (ಅಂತರ) ಇದೆ.

ಇ) ವಿದ್ಯುತ್ ಬೇಡಿಕೆ ಮತ್ತು ವಿದ್ಯುತ್ ಲಭ್ಯತೆಗಳ ನಡುವೆಯ ಅಂತರವನ್ನು ಕಡಿಮೆಗೊಳಿಸಲು ಹೆಚ್ಚಿನ ವಿದ್ಯುತ್ ಉತ್ಪಾದನೆಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಅಲಮಟ್ಟಿ ಜಲ ವಿದ್ಯುತ್ ಉತ್ಪಾದನಾ ಯೋಜನೆಯಲ್ಲಿ 55 ಮೆ.ವ್ಯಾ. ಸಾಮರ್ಥ್ಯದ 3ನೇ ಘಟಕವನ್ನು 13.1.2005 ರಂದು ಕಆರ್ಯಾರಂಭ ಮಾಡಿದೆ. ತಲಾ 55 ಮೆ.ವ್ಯಾ. ಸಮರ್ಥ್ಯದ ಉಳಿದ 3 ಘಟಕಗಳು ಜುಲೈ 2005ರ ಅಂತಯದ ವೇಳೆಗೆ ಕಾರ್ಯಾರಂಭ ಮಾಡಲಿದೆ.

2. 500 ಮೆ.ವ್ಯಾ. ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯು ಭರದಿಂದ ಸಾಗುತ್ತಿದೆ.

3. ಬಿಡದಿ ವಿದ್ಯುತ್ ಘಟಕ, ನಾಗಝರಿ ವಿದ್ಯುದಾಗಾರ ಆಧುನೀಕರಣ ಮತ್ತು ನವೀಕರಣ ಮತ್ತು ಗುಂಡಾಲ್ ಜಲ ವಿದ್ಯುತ್ ಯೋಜನೆಯ ಕಾಮಗಾರಿಗಳ ಪ್ರಗತಿಯು ವಿವಿಧ ಹಂತದಲ್ಲಿವೆ.

4. ವರಾಹಿ ಜಲ ವಿದ್ಯುತ್ ಯೋಜನೆಯ 2ನೇ ಹಂತದ ಕಾಮಗಾರಿಯು ಶೀಘ್ರದಲ್ಲಿ ಆರಂಭವಾಗಲಿದೆ. ಮೇಲ್ಕಂಡ ಎಲ್ಲಾ ಯೋಜನೆಗಳು ಪೂರ್ಣಗೊಂಡ ನಂತರ ರಾಜ್ಯದ ವಿದ್ಯುತ್ ಉತ್ಪಾದನಾ ವ್ಯವಸ್ಥೆಗೆ 3475 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚುವರಿಯಾಗಿ ಸೇರ್ಪಡೆಯಾಗುತ್ತದೆ.

5. ಖಾಸಗೀ ವಲಯದಲ್ಲಿ ನಾಗಾರ್ಜುನ ಪವರ್ ಕಾರ್ಪೊರೇಷನ್ ಕಂಪನಿ ಸಂಸ್ಥೆಯು 1015 ಮೆ.ವ್ಯಾ. ಶಾಖೋತ್ಪನ್ನ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯು ಇರುತ್ತದೆ. ಅಲ್ಲದೇ ಅಸಂಪ್ರದಾಯ ಇಂಧನ ಮೂಲಗಳಿಂದಲೂ ಸುಮಾರು 150 ಮೆ.ವ್ಯಾ. ಹೆಚ್ಚುವರಿ ವಿದ್ಯುತ್ ಉತ್ಪಾದನೆಯಾಗುವ ನಿರೀಕ್ಷೆ ಇದೆ.

2050(2795) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಜಿಲ್ಲೆಗಳ ಸಂಖ್ಯೆ ಎಷ್ಟು;

ಆ) ಹೊಸದಾಗಿ ಜಿಲ್ಲೆಗಳನ್ನು ರಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ;

ಇ) ಇದ್ದಲ್ಲಿ, ಆ ಜಿಲ್ಲೆಗಳ ಹೆಸರುಗಳನ್ನು ತಿಳಿಸುವುದು;

ಈ) ಅದೇ ರೀತಿ ರಾಜ್ಯದಲ್ಲಿರುವ ಒಟ್ಟು ತಾಲ್ಲೂಕುಗಳ ಸಂಖ್ಯೆ ಎಷ್ಟು;

ಉ) ಹೊಸ ತಾಲ್ಲೂಕುಗಳನ್ನು ರಚಿಸುವ ಆಲೋಚನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಅಂತಹ ತಾಲ್ಲೂಕುಗಳ ಹೆಸರುಗಳನ್ನು ತಿಳಿಸಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) 27.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) 176

ಉ) ಇಲ್ಲ, ಉದ್ಭವಿಸುವುದಿಲ್ಲ.

2051(2296) ಶ್ರೀ ಬಸವರಾಜ್ ರಾಯರೆಡ್ಡಿ (ಯಲ್‌ಬುರ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳಿಗೆ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳ ವ್ಯಕ್ತಿಗಳನ್ನು ದೇವಸ್ಥಾನಗಳ ಅರ್ಚಕರನ್ನಾಗಿ ನೇಮಕ ಮಾಡಲು ಸರ್ಕಾರ ಉದ್ದೇಶಿಸಿದೆಯೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು):

ಅ) ಹೌದು. ಮುಜರಾಯಿ ಆಡಳಿತಕ್ಕೆ ಒಳಪಡುವ ದೇವಾಲಯಗಳಲ್ಲಿ ವಂಶಪಾರಂಪರ್ಯ ಆಧಾರದ ಮೇಲೆ ತುಂಬಬೇಕಾದ ಅರ್ಚಕರ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಅರ್ಚಕ ಹುದ್ದೆಗಳಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಹ ವ್ಯಕ್ತಿಗಳನ್ನು ದೇವಸ್ಥಾನದ ಸಂಪ್ರದಾಯ ಹಾಗೂ ಪದ್ಧತಿಯಂತೆ ಅರ್ಚಕರನ್ನಾಗಿ ನೇಮಕ ಮಾಡಲಾಗುತ್ತಿದೆ.

ಆ) ಈ ಇಲಾಖೆಗೆ ಕರ್ನಾಟಕ ರಾಜ್ಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯಿದೆ 1997 ಮತ್ತು ನಿಯಮ 2002 ರಾಜ್ಯಾದ್ಯಂತ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ ಹೊಸ ಕಾಯಿದೆಯ ಸೆಕ್ಷನ್ 2 ಉಪ ಸೆಕ್ಷನ್ 15ರ ಪ್ರಕಾರ ವಂಶಪಾರಂಪರ್ಯ ಆಯಾಯ ದೇವಾಲಯಗಳ ಸಂಪ್ರದಾಯ ಪದ್ಧತಿಗೆ ಅನುಸಾರವಾಗಿ ಅರ್ಚಕರು ಅನುವಂಶಿಕ ಹಕ್ಕನ್ನು ಹೊಂದಿರುತ್ತಾರೋ, ಅಂತಹವರ ವಾರಸುದಾರರ ಹುದ್ದೆಯನ್ನು ಹೊರತುಪಡಿಸಿ, ಅನುವಂಶಿಕರಲ್ಲದ ಉಳಿದ ಅರ್ಚಕರ ಹುದ್ದೆಗೆ ಕಾಯಿದೆ ಸೆಕ್ಷನ್ 10ರ ಪ್ರಕಾರ ಸಂಬಂಧಿಸಿದ ದೇವಾಲಯದ ಆಗಮ ಶಾಸ್ತ್ರದ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಇಲಾಖೆಯ ಆಡಳಿತ ವ್ಯಾಪ್ತಿಗೆ ಬರುವ ದೇವಾಲಯಗಳಲ್ಲಿ ಖಾಲಿ ಇರುವ ಹುದ್ದೆಗೆ ಹೊಸ ಕಾಯಿದೆಯ ಸೆಕ್ಷನ್ 58ರ ಪ್ರಕಾರ ದೇವಾಲಯದ ಸಂಪ್ರದಾಯ, ಆಚರಣೆ ಪದ್ಧತಿಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಾನುಸಾರ ನೇಮಕಾತಿ ಮಾಡಿಕೊಳ್ಳುವ ಅವಕಾಶವಿರುತ್ತದೆ.